**1ನೇ ಹೆಚ್ಚುವರಿ ಹಿರಿಯ  ವ್ಯವಹಾರಿಕ ನ್ಯಾಯಾಧೀಶರ ಮತ್ತು  ಪ್ರಥಮ ದರ್ಜೆ**
**ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಪುತ್ತೂರು , ದ.ಕ.**

ದಿನಾಂಕ 25-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಶ್ರೀ . ಎಸ್.ಕೆ.ಎನ್.  ವಕೀಲರಿಂದಃ**

ನಾನು  ಈ ವ್ಯವಹರಣೆಯಲ್ಲಿ ಅರ್ಜಿದಾರರ ಗಾರ್ಡಿಯನ್ ಆಗಿದ್ದು  ಅರ್ಜಿದಾರರ ಪರ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದ ಸಾಕ್ಷ್ಯವನ್ನು ಸಲ್ಲಿಸಿದ್ದು ಅದಲ್ಲಿರುವ ಎಲ್ಲಾ ವಿಚಾರಗಳು ಸತ್ಯವಾಗಿರುತ್ತದೆ.

ನಾನು ಪ್ರ. ವ. ವರದಿ, ದೂರು, ಸ್ಥಳ ಮಹಜರು, ಕರಡು ನಕಾಶೆ, IMV ವರದಿ,  ಗಾಯದ ಪ್ರಮಾಣಪತ್ರ, ಕಲಂ 133 ಮೋಟಾರ್ ವಾಹನ ಕಾಯ್ದೆಯಡಿ  ಸುದರ್ಶನ್ ಕುಮಾರ್  ರವರಿಗೆ ನೀಡಿದ ನೋಟೀಸು,  ಸುದರ್ಶನ್ ಕುಮಾರ್ ರವರು ನೀಡಿರುವ ಉತ್ತರ,  ಕಲಂ 133 ಮೋಟಾರ್ ವಾಹನ ಕಾಯ್ದೆಯಡಿ  1ನೇ ಎದುರುದಾರರಿಗೆ ನೀಡಿದ ನೋಟೀಸು,  1ನೇ ಎದುರುದಾರರು  ನೀಡಿರುವ ಉತ್ತರ,ಅಂತಿಮ ವರದಿಯ ಯಥಾ ನಕಲುಗಳು, ಅಂಗನ್ಯೂನ್ಯತಾ ಪ್ರಮಾಣಪತ್ರ ,  ಮೆಡಿಕಲ್ ಬಿಲ್ಲುಗಳನ್ನು ಹಾಜರುಪಡಿಸಿದ್ದು  ಅವುಗಳನ್ನು ಕ್ರಮವಾಗಿ  ನಿ.ಪಿ.1 ರಿಂದ ನಿ.ಪಿ.13 ಎಂದು ಗುರುತಿಸಲಾಯಿತು.

ಆದ್ದರಿಂದ ನಾನು ಸಲ್ಲಿಸಿರುವ ಅರ್ಜಿಯನ್ನು ಪುರಸ್ಕರಿಸಬೇಕಾಗಿ ಪ್ರಾರ್ಥಿಸುತ್ತೇನೆ.

**ಪಾಟೀ ಸವಾಲುಃ 1ನೇ ಎದುರುದಾರರ ಪರ ವಕೀಲರಿಂದಃ**

1 ನೇ ಎದುರುದಾರು ಹಾಗೂ ಅವರ  ಪರ ವಕೀಲರು ಗೈರು ಹಾಜರರಾಗಿದ್ದು , 1ನೇ ಎದುರುದಾರರು ಪ್ರತಿವಾದ ಪತ್ರ ಸಲ್ಲಿಸದೇ ಇದ್ದ ಕಾರಣ ಅವರ ಪರ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪಾಟೀ ಸವಾಲುಃ 2ನೇ ಎದುರುದಾರರ ಪರಃ ಶ್ರೀಮತಿ ಎಸ್.ಎಂ. ಎ.ವಕೀಲರಿಂದಃ**

ಅಪಘಾತ ಕಾಲದಲ್ಲಿ ಕಾರನ್ನು ನಾನೇ ಚಾಲಯಿಸುತ್ತಿದ್ದೇನು. ಅಪಘಾತ ನನ್ನ ತಪ್ಪಿನಿಂದ ಆಗಿದ್ದು ಎದುರು  ಬಂದ ಕಾರಿನ ಚಾಲಕನ ತಪ್ಪಿನಿಂದ ಆಗಿಲ್ಲ ಎಂದರೆ ಸುಳ್ಳು.  ಅಪಘಾತದಲ್ಲಿ ನನ್ನ ಮಗನ ಹಣೆಗೆ ಪೆಟ್ಟಾಗಿದೆ.  ಗಾಯದ ಪ್ರಮಾಣಪತ್ರದಲ್ಲಿ  ಸೂಚಿಸಿರುವಂತಹ ಗಾಯಗಳು ನನ್ನ ಮಗನಿಗೆ ಆಗಿಲ್ಲ ಎಂದರೆ ಸರಿಯಲ್ಲ. ಅಂಗನ್ಯೂನ್ಯತಾ ಪ್ರಮಾಣಪತ್ರದಲ್ಲಿ ನಮೂದಿಸಿರುವಂತಹ ಶಾಶ್ವತ ಅಂಗನ್ಯೂನ್ಯತೆ ನನ್ನ ಮಗನಿಗೆ ಆಗಿಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ವೈದ್ಯರ ಮೇಲೆ ಪ್ರಭಾವ ಬೀರಿ ಅಂಗನ್ಯೂನ್ಯತಾ ಪ್ರಮಾಣಪತ್ರವನ್ನು ಪಡೆದಿದ್ದೇವೆ

ಎಂದರೆ ಸುಳ್ಳು. ಅಪಘಾತ ಸಮಯದಲ್ಲಿ ನನ್ನ ಮಗ 10 ನೇ ತರಗತಿ ವ್ಯಾಸಂಗ ಮಾಡುತ್ತಿದ್ದ . ಪ್ರಸ್ತುತ ಪ್ರಥಮ ಪಿಯುಸಿ ಓದುತ್ತಿದ್ದಾನೆ. ಅಪಘಾತದಿಂದಾದ ಗಾಯಗಳಿಂದಾಗಿ ನನ್ನ ಮಗನ ವಿದ್ಯಾಬ್ಯಾಸಕ್ಕೆ ಯಾವುದೇ ತೊಂದರೆ ಅಗಿಲ್ಲ ಎಂದರೆ ಸುಳ್ಳು. Star Health insurance ನಿಂದ ವೈದ್ಯಕೀಯ ಖರ್ಚಿನ ಮರುಪಾವತಿ ಎಷ್ಟು ಅಗಿದೆ ಎಂದು ನನಗೆ ಗೊತ್ತಿಲ್ಲ. ನಮಗೆ ತಗುಲಿದ ಸಂಪೂರ್ಣ ವೈದ್ಯಕೀಯ ಖರ್ಚು Star Health insurance ನಿಂದ ಮರುಪಾವತಿಯಾಗಿದೆ ಎಂದರೆ ಸಾಕ್ಷಿಯು 14,719/- ರೂ. ಹಣ ಮರುಪಾವತಿಯಾಗ ಬೇಕಾಗಿದೆ ಎಂದು ನುಡಿಯುತ್ತಾರೆ. ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಹಾಜರುಪಡಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ, ಹೇ, ಕೇ, ಸರಿ ಇದೆ.

1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಢಾಧಿಕಾರಿ, ಪುತ್ತೂರು ದ.ಕ.